INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -05,September-October, 2026
Page No,19-30
Peer -Reviewed, Refereed Journal

# ಪ್ರಾಚೀನ ಬೌದ್ಧ ಮಹಾವಿಹಾರಗಳ ಕುರಿತ ವಿಶ್ಲೇಷಣಾತ್ಮಕ ಪರಿಶೀಲನೆ

**ಡಾ ಪ್ರಕಾಶ.ಎನ್.**[1]

**ಸಾರಾಂಶ:** ಭಾರತದ ಪ್ರಾಚೀನ ಇತಿಹಾಸದಲ್ಲಿ ಬೌದ್ಧಧಮ್ಮವು ಕೇವಲ ಧಾರ್ಮಿಕ ಚಳವಳಿಯಾಗಿ ಮಾತ್ರವಲ್ಲದೆ ಶಿಕ್ಷಣ, ಸಂಸ್ಕೃತಿ, ತತ್ವಶಾಸ್ತ್ರ ಮತ್ತು ಸಾಮಾಜಿಕ ಪರಿವರ್ತನೆಯ ಪ್ರಮುಖ ಶಕ್ತಿಯಾಗಿ ಬೆಳೆಯಿತು. ಈ ಬೆಳವಣಿಗೆಯಲ್ಲಿ ಬೌದ್ಧ ಮಹಾವಿಹಾರಗಳು ಮಹತ್ವದ ಪಾತ್ರವನ್ನು ಕೂಡ ಹೆಚ್ಚು ವಹಿಸಿರುತ್ತವೆ. ಈ ವಿಹಾರಗಳು ಆರಂಭದಲ್ಲಿ ಭಿಕ್ಷುಗಳ ವಾಸಸ್ಥಳಗಳಾಗಿದ್ದರೂ, ಕಾಲಕ್ರಮೇಣ ಅವು ಉನ್ನತ ಶಿಕ್ಷಣ, ತಾತ್ವಿಕ ಚರ್ಚೆ, ಧಾರ್ಮಿಕ ಅಧ್ಯಯನ, ಗ್ರಂಥರಚನೆ ಮತ್ತು ಜ್ಞಾನ ಪ್ರಸಾರದ ಕೇಂದ್ರಗಳಾಗಿ ರೂಪುಗೊಂಡವು. ನಳಂದಾ, ವಿಕ್ರಮಶೀಲಾ, ವಲ್ಲಭಿ, ಓದಂತಪುರಿ, ಸೋಮಪುರ ಮತ್ತು ಜಗದ್ದಲದಂತಹ ಮಹಾವಿಹಾರಗಳು ಪ್ರಾಚೀನ ಭಾರತದ ಪ್ರಸಿದ್ಧ ಬೌದ್ಧ ಶಿಕ್ಷಣ ಕೇಂದ್ರಗಳಾಗಿದ್ದವು. ಈ ಲೇಖನವು ಪ್ರಾಚೀನ ಬೌದ್ಧ ಮಹಾವಿಹಾರಗಳ ಉಗಮ, ಬೆಳವಣಿಗೆ, ಶೈಕ್ಷಣಿಕ ವ್ಯವಸ್ಥೆ, ಸಾಮಾಜಿಕ ಕೊಡುಗೆ ಮತ್ತು ಅವನತಿಯ ಕಾರಣಗಳನ್ನು ವಿಶ್ಲೇಷಿಸುತ್ತದೆ.

**ಪ್ರಧಾನ ಪದಗಳು: ಬೌದ್ಧ ಧಮ್ಮ, ಮಹಾವಿಹಾರ, ನಳಂದಾ, ವಿಕ್ರಮಶೀಲಾ, ಶಿಕ್ಷಣ, ಸಂಘ, ವಿಹಾರ.**

**ಪೀಠಿಕೆ:** ಗುರು ಬುದ್ಧರ ಕಾಲದಲ್ಲಿ ಬೌದ್ಧ ಭಿಕ್ಷುಗಳು ಸಾಮಾನ್ಯವಾಗಿ ಸಂಚಾರಿ ಜೀವನವನ್ನು ನಡೆಸುತ್ತಿದ್ದರು. ಮಳೆಗಾಲದಲ್ಲಿ ಮಾತ್ರ ಒಂದೇ ಸ್ಥಳದಲ್ಲಿ ನೆಲೆಸಿ ಧ್ಯಾನ, ಧರ್ಮೋಪದೇಶ ಮತ್ತು ಅಧ್ಯಯನದಲ್ಲಿ ತೊಡಗುತ್ತಿದ್ದರು. ಕ್ರಮೇಣ ಬೌದ್ಧ ಸಂಘದ ವಿಸ್ತರಣೆಯೊಂದಿಗೆ ಶಾಶ್ವತ ವಾಸಸ್ಥಳಗಳ ಅಗತ್ಯತೆ ಉಂಟಾಯಿತು. ಈ ಅಗತ್ಯದಿಂದ ವಿಹಾರಗಳ ಪರಂಪರೆ ಬೆಳೆಯಿತು. ಪ್ರಾರಂಭಿಕ ವಿಹಾರಗಳು ಭಿಕ್ಷುಗಳ ವಾಸಸ್ಥಳಗಳಾಗಿದ್ದವು. ಆದರೆ ಅನಂತರ ರಾಜರು, ವ್ಯಾಪಾರಿಗಳು ಮತ್ತು ಶ್ರೀಮಂತ ದಾನಿಗಳ ಆಶ್ರಯದಿಂದ ಅವು ದೊಡ್ಡ ಸಂಸ್ಥೆಗಳಾಗಿ ಬೆಳೆಯತೊಡಗಿದವು. ವಿಶಾಲ ಕಟ್ಟಡಗಳು, ಅಧ್ಯಯನ ಕೊಠಡಿಗಳು, ಗ್ರಂಥಾಲಯಗಳು, ಧ್ಯಾನ ಕೇಂದ್ರಗಳು ಮತ್ತು ವಿದ್ಯಾರ್ಥಿ ವಸತಿ ಸೌಲಭ್ಯಗಳನ್ನು ಹೊಂದಿದ್ದ ಪ್ರಮುಖ ವಿಹಾರಗಳನ್ನು ಮಹಾವಿಹಾರಗಳು ಎಂದು ಕರೆಯಲಾಯಿತು.

---

[1].**ಸಹಪ್ರಾಧ್ಯಾಪಕರು,ಇತಿಹಾಸ ವಿಭಾಗ, ಮಹಾರಾಣಿ ಮಹಿಳಾ ಕಾಲೇಜು, ಮೈಸೂರು**

**ಅಧ್ಯಯನದ ಮಹತ್ವ:** ಪ್ರಾಚೀನ ಬೌದ್ಧ ಮಹಾವಿಹಾರಗಳು ಭಾರತದ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಅರ್ಥಮಾಡಿಕೊಳ್ಳಲು ಅತ್ಯಂತ ಪ್ರಮುಖವಾದ ಅಧ್ಯಯನ ಕ್ಷೇತ್ರವಾಗಿರುತ್ತದೆ. ಆರಂಭದಲ್ಲಿ ಭಿಕ್ಷುಗಳ ವಾಸಸ್ಥಳಗಳಾಗಿ ರೂಪುಗೊಂಡ ವಿಹಾರಗಳು ಅನಂತರ ಉನ್ನತ ಶಿಕ್ಷಣ ಮತ್ತು ಜ್ಞಾನ ಪ್ರಸಾರದ ಪ್ರಮುಖ ಕೇಂದ್ರಗಳಾಗಿ ಅಭಿವೃದ್ಧಿ ಹೊಂದಿದವು. ನಳಂದಾ, ವಿಕ್ರಮಶೀಲಾ, ವಲ್ಲಭಿ, ಓದಂತಪುರಿ ಮತ್ತು ಸೋಮಪುರದಂತಹ ಮಹಾವಿಹಾರಗಳು ಭಾರತದ ಪ್ರಾಚೀನ ಶಿಕ್ಷಣ ವ್ಯವಸ್ಥೆಯ ಶ್ರೇಷ್ಠತೆಯನ್ನು ಪ್ರತಿನಿಧಿಸುತ್ತವೆ. ಈ ಅಧ್ಯಯನವು ಹೊಂದಿರುವ ಪ್ರಮುಖ ಮಹತ್ವವೆಂದರೆ; ಪ್ರಾಚೀನ ಭಾರತದ ಶಿಕ್ಷಣ ವ್ಯವಸ್ಥೆಯನ್ನು ತಿಳಿದುಕೊಳ್ಳಲು ಸಹಕಾರಿಯಾಗುತ್ತದೆ. ಬೌದ್ಧ ಧಮ್ಮದ ಸಂಘಟನೆ ಮತ್ತು ವಿಸ್ತರಣೆಯನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ. ಬೌದ್ಧ ತತ್ವಶಾಸ್ತ್ರ ಮತ್ತು ಸಾಹಿತ್ಯದ ಬೆಳವಣಿಗೆಯನ್ನು ಅಧ್ಯಯನ ಮಾಡಲು ಅವಕಾಶ ನೀಡುತ್ತದೆ. ಭಾರತ ಮತ್ತು ಇತರ ಏಷ್ಯಾದ ರಾಷ್ಟ್ರಗಳ ನಡುವಿನ ಸಾಂಸ್ಕೃತಿಕ ಸಂಬಂಧಗಳನ್ನು ತಿಳಿಸುತ್ತದೆ. ಪ್ರಾಚೀನ ಭಾರತದ ವಾಸ್ತುಶಿಲ್ಪ ಮತ್ತು ಕಲೆಯ ಬೆಳವಣಿಗೆಯ ಅಧ್ಯಯನಕ್ಕೆ ಸಹಕಾರಿಯಾಗಿದೆ. ನಳಂದಾದಂತಹ ಮಹಾವಿಹಾರಗಳ ಮೂಲಕ ಭಾರತದ ಜಾಗತಿಕ ಶೈಕ್ಷಣಿಕ ಕೊಡುಗೆಯನ್ನು ಗುರುತಿಸಲು ಸಾಧ್ಯವಾಗುತ್ತದೆ. ಆಧುನಿಕ ಶಿಕ್ಷಣ ಸಂಸ್ಥೆಗಳ ಬೆಳವಣಿಗೆಯೊಂದಿಗೆ ಪ್ರಾಚೀನ ಶಿಕ್ಷಣ ಪರಂಪರೆಯನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಲು ಸಾಧ್ಯವಾಗುತ್ತದೆ. ಪ್ರಾಚೀನ ಬೌದ್ಧ ಮಹಾವಿಹಾರಗಳ ಅಧ್ಯಯನವು ಕೇವಲ ಧಾರ್ಮಿಕ ಇತಿಹಾಸಕ್ಕೆ ಸೀಮಿತವಾಗದೆ ಭಾರತದ ಸಮಗ್ರ ನಾಗರಿಕತೆ ಮತ್ತು ಜ್ಞಾನ ಪರಂಪರೆಯ ಅಧ್ಯಯನಕ್ಕೂ ಮಹತ್ವದ್ದಾಗಿದೆ.

**ಅಧ್ಯಯನದ ಉದ್ದೇಶಗಳು**

- ಪ್ರಾಚೀನ ಬೌದ್ಧ ವಿಹಾರಗಳ ಉಗಮ, ಬೆಳವಣಿಗೆ ಮತ್ತು ಐತಿಹಾಸಿಕ ಹಿನ್ನೆಲೆಯನ್ನು ಅಧ್ಯಯನ ಮಾಡುವುದು.
- ನಳಂದಾ, ವಿಕ್ರಮಶೀಲಾ, ವಲ್ಲಭಿ, ಓದಂತಪುರಿ ಮತ್ತು ಸೋಮಪುರದಂತಹ ಮಹಾವಿಹಾರಗಳ ವೈಶಿಷ್ಟ್ಯತೆಗಳನ್ನು ವಿಶ್ಲೇಷಿಸುವುದು.
- ಮಹಾವಿಹಾರಗಳ ಶೈಕ್ಷಣಿಕ ವ್ಯವಸ್ಥೆ ಮತ್ತು ಪಠ್ಯಕ್ರಮವನ್ನು ವಿವರಿಸುವುದು.
- ಬೌದ್ಧ ಭಿಕ್ಷುಗಳು ಮತ್ತು ವಿದ್ವಾಂಸರ ಪಾತ್ರವನ್ನು ಪರಿಶೀಲಿಸುವುದು.
- ಬೌದ್ಧ ಧರ್ಮದ ಪ್ರಸಾರದಲ್ಲಿ ಮಹಾವಿಹಾರಗಳ ಕೊಡುಗೆಯನ್ನು ವಿಶ್ಲೇಷಿಸುವುದು.
- ಪ್ರಾಚೀನ ಭಾರತದ ಜ್ಞಾನ ಪ್ರಸಾರದಲ್ಲಿ ಮಹಾವಿಹಾರಗಳ ಪಾತ್ರವನ್ನು ಅಧ್ಯಯನ ಮಾಡುವುದು.
- ಬೌದ್ಧ ಮಹಾವಿಹಾರಗಳ ವಾಸ್ತುಶಿಲ್ಪ ಮತ್ತು ಕಲಾತ್ಮಕ ವೈಶಿಷ್ಟ್ಯತೆಗಳನ್ನು ಪರಿಶೀಲಿಸುವುದು.

- ಮಹಾವಿಹಾರಗಳ ಅವನತಿಗೆ ಕಾರಣವಾದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಅಂಶಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವುದು.

**ಅಧ್ಯಯನದ ವಿಧಾನ:** ಪ್ರಾಚೀನ ಬೌದ್ಧ ಮಹಾವಿಹಾರಗಳ ಕುರಿತ ಅಧ್ಯಯನವು ಬಹುಮುಖ್ಯವಾಗಿ ಐತಿಹಾಸಿಕ ಮತ್ತು ವಿಶ್ಲೇಷಣಾತ್ಮಕ ವಿಧಾನವನ್ನು ಅನುಸರಿಸುತ್ತದೆ. ಅಧ್ಯಯನದ ಪ್ರಾಥಮಿಕ ಮೂಲಗಳಾಗಿ; ಪಾಳಿ ಸಾಹಿತ್ಯ, ತ್ರಿಪಿಟಕ ಗ್ರಂಥಗಳು, ವಿನಯಪಿಟಕ, ದೀಪವಂಶ ಮತ್ತು ಮಹಾವಂಶ, ಬೌದ್ಧ ಶಾಸನಗಳು, ನಾಣ್ಯಗಳು ಮತ್ತು ಪುರಾತತ್ವ ಅವಶೇಷಗಳು, ಚೀನೀ ಯಾತ್ರಿಕರಾದಂತಹ ಹ್ಯುಯೆನ್‌ತ್ಸಾಂಗ್ ಮತ್ತು ಇತ್ಸಿಂಗ್ ಅವರ ಪ್ರವಾಸ ಕಥನಗಳು ನಳಂದಾ ಸೇರಿದಂತೆ ಪ್ರಾಚೀನ ಬೌದ್ಧ ಶಿಕ್ಷಣ ಕೇಂದ್ರಗಳ ಕುರಿತು ಮಹತ್ವದ ಮಾಹಿತಿಯನ್ನು ಒದಗಿಸುತ್ತವೆ. ದ್ವಿತೀಯಕ ಮೂಲಗಳಾಗಿ; ಇತಿಹಾಸ ಗ್ರಂಥಗಳು, ಸಂಶೋಧನಾ ಲೇಖನಗಳು, ಬೌದ್ಧಧಮ್ಮದ ಆಧುನಿಕ ಅಧ್ಯಯನಗಳು, ವಿಶ್ವವಿದ್ಯಾನಿಲಯಗಳ ಸಂಶೋಧನಾ ಮಹಾಪ್ರಬಂಧಗಳು, ಪುರಾತತ್ವ ಇಲಾಖೆಯ ವರದಿಗಳು, ಬೌದ್ಧ ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಗ್ರಂಥಗಳು.

**ಪ್ರಾಚೀನ ಬೌದ್ಧ ಮಹಾವಿಹಾರಗಳ ಉಗಮ, ಬೆಳವಣಿಗೆ ಮತ್ತು ಐತಿಹಾಸಿಕ ಹಿನ್ನೆಲೆ**

ಬೌದ್ಧಧಮ್ಮದ ಪ್ರಾರಂಭಿಕ ಹಂತದಲ್ಲಿ ರಾಜಗೃಹ, ಶ್ರಾವಸ್ತಿ ಮತ್ತು ವೈಶಾಲಿಯಂತಹ ನಗರಗಳಲ್ಲಿ ಬೌದ್ಧ ಭಿಕ್ಷುಗಳಿಗೆ ವಾಸಸ್ಥಳಗಳು ನಿರ್ಮಾಣವಾದವು. ಅನಾಥಪಿಂಡಿಕನು ಬುದ್ಧ ಮತ್ತು ಅವರ ಸಂಘಕ್ಕಾಗಿ ಶ್ರಾವಸ್ತಿಯಲ್ಲಿ ನಿರ್ಮಿಸಿದ ಜೇತವನ ವಿಹಾರ ಪ್ರಾಚೀನ ಬೌದ್ಧ ವಿಹಾರಗಳಲ್ಲೊಂದು ಪ್ರಮುಖವಾಗಿರುತ್ತದೆ. ಮೌರ್ಯ ಸಾಮ್ರಾಟನಾಗಿದ್ದ ಅಶೋಕನ ಆಡಳಿತಾವಧಿಯಲ್ಲಿ ಬೌದ್ಧಧಮ್ಮಕ್ಕೆ ರಾಜಾಶ್ರಯ ದೊರೆಯಿತು. ಇದರ ಪರಿಣಾಮವಾಗಿ ಅನೇಕ ಸ್ತೂಪಗಳು, ವಿಹಾರಗಳು ಮತ್ತು ಧಾರ್ಮಿಕ ಕೇಂದ್ರಗಳು ಸ್ಥಾಪಿಸಲ್ಪಟ್ಟವು. ಅನಂತರ ಗುಪ್ತ ಮತ್ತು ಪಾಲ ರಾಜವಂಶಗಳ ಕಾಲದಲ್ಲಿ ಬೌದ್ಧ ಶಿಕ್ಷಣ ಸಂಸ್ಥೆಗಳು ಇನ್ನಷ್ಟು ಅಭಿವೃದ್ಧಿ ಹೊಂದಿದವು. ಪೂರ್ವ ಭಾರತದ ಬಿಹಾರ ಮತ್ತು ಬಂಗಾಳ ಪ್ರದೇಶಗಳಲ್ಲಿ ಪಾಲ ರಾಜರ ಆಶ್ರಯದಲ್ಲಿ ಅನೇಕ ಮಹಾವಿಹಾರಗಳು ಸ್ಥಾಪನೆಯಾದವು. ಇವು ಭಾರತೀಯ ಉಪಖಂಡದಷ್ಟೇ ಅಲ್ಲದೆ ಟಿಬೆಟ್, ಚೀನಾ ಮತ್ತು ಆಗ್ನೇಯ ಏಷ್ಯಾದ ಬೌದ್ಧ ಜಗತ್ತಿನೊಂದಿಗೆ ಸಂಪರ್ಕ ಹೊಂದಿದ್ದವು.

**ಪ್ರಾಚೀನ ಬೌದ್ಧ ಮಹಾವಿಹಾರಗಳ ನಿರ್ಮಾಣದ ಉದ್ದೇಶಗಳು**

ಪ್ರಾಚೀನ ಕಾಲದಲ್ಲಿ ಬೌದ್ಧ ಮಹಾವಿಹಾರಗಳನ್ನು ನಿರ್ಮಿಸಲು ಹಲವಾರು ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಉದ್ದೇಶಗಳಿದ್ದವು. ಅವುಗಳೆಂದರೆ;

- ಬೌದ್ಧ ಭಿಕ್ಷುಗಳು ಮಳೆಗಾಲ ಸೇರಿದಂತೆ ನಿರ್ದಿಷ್ಟ ಅವಧಿಗಳಲ್ಲಿ ಒಂದೇ ಸ್ಥಳದಲ್ಲಿ ವಾಸಿಸಲು ಸೂಕ್ತವಾದ ವ್ಯವಸ್ಥೆಯನ್ನು ಕಲ್ಪಿಸುವುದು.
- ಗುರು ಬುದ್ಧರ ಉದಾತ್ತ ಸದ್ಗುಣ ಬೋಧನೆಗಳು, ಧಮ್ಮ ಮತ್ತು ವಿನಯವನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗಳಿಗೆ ತಲುಪಿಸುವ ಉದ್ದೇಶದಿಂದ ಮಹಾವಿಹಾರಗಳನ್ನು ಸ್ಥಾಪಿಸಲಾಯಿತು.
- ಮಹಾವಿಹಾರಗಳು ಉನ್ನತ ಶಿಕ್ಷಣ ಕೇಂದ್ರಗಳಾಗಿಯೂ ಕಾರ್ಯನಿರ್ವಹಿಸುತ್ತಿದ್ದವು. ಬೌದ್ಧ ತತ್ವಶಾಸ್ತ್ರದ ಜೊತೆಗೆ ವ್ಯಾಕರಣ, ತರ್ಕಶಾಸ್ತ್ರ, ವೈದ್ಯಶಾಸ್ತ್ರ, ಗಣಿತ ಮತ್ತು ಇತರ ವಿಷಯಗಳನ್ನು ಇಲ್ಲಿ ಬೋಧಿಸಲಾಗುತ್ತಿತ್ತು.
- ಭಿಕ್ಷುಗಳು ಶಾಂತವಾದ ವಾತಾವರಣದಲ್ಲಿ ಧ್ಯಾನ, ಚಿಂತನೆ ಮತ್ತು ಆಧ್ಯಾತ್ಮಿಕ ಸಾಧನೆ ನಡೆಸಲು ಮಹಾವಿಹಾರಗಳು ಸೂಕ್ತ ಸ್ಥಳವನ್ನು ಒದಗಿಸುತ್ತಿದ್ದವು.
- ಬೌದ್ಧ ಸಂಘದ ಸದಸ್ಯರನ್ನು ಸಂಘಟಿಸುವುದು, ಸಂಘದ ನಿಯಮಗಳನ್ನು ಪಾಲಿಸುವುದು ಹಾಗೂ ಧಾರ್ಮಿಕ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ನಡೆಸುವುದು.
- ತ್ರಿಪಿಟಕ ಮತ್ತು ಇತರ ಬೌದ್ಧ ಗ್ರಂಥಗಳನ್ನು ಅಧ್ಯಯನ ಮಾಡುವುದು, ಪ್ರತಿಲೇಖನ ಮಾಡುವುದು.
- ವಿವಿಧ ಬೌದ್ಧ ಪಂಥಗಳ ವಿದ್ವಾಂಸರು ಹಾಗೂ ಇತರ ತತ್ವಶಾಸ್ತ್ರಗಳ ಚಿಂತಕರು ಚರ್ಚೆ ಮತ್ತು ವಾದ–ವಿವಾದ ನಡೆಸುವುದು.
- ಜನರಿಗೆ ಗುರು ಬುದ್ಧರ ಧಮ್ಮ, ಅಹಿಂಸೆ, ಕರುಣೆ ಮತ್ತು ನೈತಿಕ ಜೀವನದ ಸಂದೇಶವನ್ನು ತಿಳಿಸುವುದು.
- ವಿದೇಶಿ ವಿದ್ಯಾರ್ಥಿಗಳು ಮತ್ತು ಬೌದ್ಧ ಭಿಕ್ಷುಗಳಿಗೆ ಶಿಕ್ಷಣ ಹಾಗೂ ವಾಸದ ಅವಕಾಶವನ್ನು ಕಲ್ಪಿಸುವ ಮೂಲಕ ವಿವಿಧ ದೇಶಗಳ ನಡುವೆ ಜ್ಞಾನ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಬೆಳೆಸುವುದು.
- ಸ್ತೂಪಗಳು, ಚೈತ್ಯಗಳು, ವಿಹಾರಗಳು ಮತ್ತು ದೇವಾಲಯಗಳ ನಿರ್ಮಾಣದ ಮೂಲಕ ಬೌದ್ಧ ಕಲೆ ಮತ್ತು ವಾಸ್ತುಶಿಲ್ಪವನ್ನು ಅಭಿವೃದ್ಧಿಪಡಿಸುವುದು.

**ಪ್ರಾಚೀನ ಬೌದ್ಧ ಮಹಾವಿಹಾರಗಳ ನಿರ್ವಹಣೆ:** ಪ್ರಾಚೀನ ಬೌದ್ಧ ಮಹಾವಿಹಾರಗಳ ಯಶಸ್ವಿ ಕಾರ್ಯನಿರ್ವಹಣೆಗೆ ಸಮರ್ಪಕವಾದ ಆಡಳಿತ ಮತ್ತು ನಿರ್ವಹಣಾ ವ್ಯವಸ್ಥೆ ಅಸ್ತಿತ್ವದಲ್ಲಿತ್ತು. ಮಹಾವಿಹಾರಗಳು ಕೇವಲ ಭಿಕ್ಷುಗಳ ವಾಸಸ್ಥಳಗಳಾಗಿರದೆ ಶಿಕ್ಷಣ, ಧರ್ಮ, ಸಂಶೋಧನೆ ಮತ್ತು

ಸಾಮಾಜಿಕ ಸೇವೆಯ ಪ್ರಮುಖ ಕೇಂದ್ರಗಳಾಗಿದ್ದರಿಂದ ಅವುಗಳ ನಿರ್ವಹಣೆಗೆ ಸಂಘಟಿತ ವ್ಯವಸ್ಥೆಯ ಅಗತ್ಯವಿತ್ತು.

- ಬೌದ್ಧ ಮಹಾವಿಹಾರಗಳ ಆಡಳಿತವು ಬಹುಮುಖ್ಯವಾಗಿ ಭಿಕ್ಷು ಸಂಘದ ನಿಯಮಗಳ ಆಧಾರದ ಮೇಲೆ ನಡೆಯುತ್ತಿತ್ತು. ಸಂಘದ ಹಿರಿಯ ಮತ್ತು ಅನುಭವಿ ಭಿಕ್ಷುಗಳು ಆಡಳಿತಾತ್ಮಕ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದರು. ವಿನಯ ನಿಯಮಗಳು ಮಹಾವಿಹಾರಗಳ ಶಿಸ್ತು ಮತ್ತು ನಿರ್ವಹಣೆಗೆ ಪ್ರಮುಖ ಮಾರ್ಗದರ್ಶಿಗಳಾಗಿದ್ದವು.
- ಪ್ರತಿ ಮಹಾವಿಹಾರಕ್ಕೂ ಒಬ್ಬ ಪ್ರಮುಖ ಅಥವಾ ಹಿರಿಯ ಭಿಕ್ಷುವಿನ ನೇತೃತ್ವ ಇರುತ್ತಿತ್ತು. ಅವರು ಶಿಕ್ಷಣ ವ್ಯವಸ್ಥೆಯನ್ನು ಮೇಲ್ವಿಚಾರಣೆ ಮಾಡುವುದು, ಭಿಕ್ಷುಗಳ ಶಿಸ್ತನ್ನು ಕಾಪಾಡುವುದು, ಧಾರ್ಮಿಕ ಚಟುವಟಿಕೆಗಳನ್ನು ಸಂಘಟಿಸುವುದು, ಮಹಾವಿಹಾರದ ಆಡಳಿತವನ್ನು ನಿರ್ವಹಿಸುವಂತಹ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದರು.
- ಬೌದ್ಧ ಭಿಕ್ಷುಗಳು ವಿನಯ ಪಿಟಕದಲ್ಲಿ ನಿರ್ದಿಷ್ಟಪಡಿಸಲಾದ ನಿಯಮಗಳನ್ನು ಪಾಲಿಸಬೇಕಾಗಿತ್ತು. ಭಿಕ್ಷುಗಳ ದೈನಂದಿನ ಜೀವನ, ಆಹಾರ, ವಾಸಸ್ಥಳ, ಪರಸ್ಪರ ಸಂಬಂಧಗಳು ಮತ್ತು ಶಿಸ್ತಿಗೆ ಸಂಬಂಧಿಸಿದ ನಿಯಮಗಳು ಮಹಾವಿಹಾರದ ನಿರ್ವಹಣೆಗೆ ಪ್ರಮುಖ ಆಧಾರವಾಗಿದ್ದವು.
- ಮಹಾವಿಹಾರಗಳ ನಿರ್ವಹಣೆಗೆ ರಾಜರು, ವ್ಯಾಪಾರಿಗಳು, ಶ್ರೀಮಂತರು ಮತ್ತು ಸಾಮಾನ್ಯ ಭಕ್ತರಿಂದ ದಾನಗಳು ದೊರೆಯುತ್ತಿದ್ದವು. ಭೂದಾನ, ಧನದಾನ ಮತ್ತು ಆಹಾರ ದಾನದ ಮೂಲಕ ಮಹಾವಿಹಾರಗಳ ಆರ್ಥಿಕ ಅಗತ್ಯಗಳನ್ನು ಪೂರೈಸಲಾಗುತ್ತಿತ್ತು. ಈ ಸಂಪನ್ಮೂಲಗಳನ್ನು; ಭಿಕ್ಷುಗಳ ಆಹಾರ ಮತ್ತು ವಸತಿ, ಕಟ್ಟಡಗಳ ನಿರ್ವಹಣೆ, ಶಿಕ್ಷಣ ವ್ಯವಸ್ಥೆ, ಗ್ರಂಥಾಲಯಗಳ ಸಂರಕ್ಷಣೆ, ಧಾರ್ಮಿಕ ಆಚರಣೆಗಳಿಗಾಗಿ ಬಳಸಲಾಗುತ್ತಿತ್ತು.
- ಮಹಾವಿಹಾರಗಳಲ್ಲಿ ಶಿಕ್ಷಕರು ಮತ್ತು ಅರಹಂತ ಭಿಕ್ಷುಗಳು ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳನ್ನು ಬೋಧಿಸುತ್ತಿದ್ದರು. ಪಠ್ಯಕ್ರಮ, ಅಧ್ಯಯನ, ಚರ್ಚೆ ಮತ್ತು ವಾದ–ವಿವಾದಗಳ ಮೂಲಕ ಶಿಕ್ಷಣ ವ್ಯವಸ್ಥೆಯನ್ನು ನಿರ್ವಹಿಸಲಾಗುತ್ತಿತ್ತು.
- ಮಹಾವಿಹಾರಗಳಲ್ಲಿ ಸಂಗ್ರಹವಾಗಿದ್ದ ಬೌದ್ಧ ಗ್ರಂಥಗಳು ಮತ್ತು ಇತರ ಜ್ಞಾನಗ್ರಂಥಗಳ ಸಂರಕ್ಷಣೆ ವಿಶೇಷ ಜವಾಬ್ದಾರಿಯಾಗಿತ್ತು. ಗ್ರಂಥಗಳನ್ನು ಪ್ರತಿಲೇಖನ ಮಾಡುವುದು, ಸುರಕ್ಷಿತವಾಗಿ ಸಂಗ್ರಹಿಸುವುದು ಮತ್ತು ವಿದ್ಯಾರ್ಥಿಗಳ ಅಧ್ಯಯನಕ್ಕಾಗಿ ಲಭ್ಯವಾಗುವಂತೆ ಮಾಡುವುದು ನಿರ್ವಹಣೆಯ ಪ್ರಮುಖ ಭಾಗವಾಗಿತ್ತು.

- ಮಹಾವಿಹಾರಗಳಲ್ಲಿ ದಿನನಿತ್ಯದ ಚಟುವಟಿಕೆಗಳು ಒಂದು ನಿರ್ದಿಷ್ಟ ಕ್ರಮದ ಪ್ರಕಾರ ನಡೆಯುತ್ತಿದ್ದವು. ಅವುಗಳಲ್ಲಿ; ಧ್ಯಾನ, ಪ್ರಾರ್ಥನೆ ಮತ್ತು ಧರ್ಮೋಪದೇಶ, ಅಧ್ಯಯನ, ಭಿಕ್ಷಾಟನೆ ಅಥವಾ ಆಹಾರ ವ್ಯವಸ್ಥೆ, ಗ್ರಂಥ ಅಧ್ಯಯನ, ತಾತ್ವಿಕ ಚರ್ಚೆಗಳು ಪ್ರಮುಖವಾಗಿದ್ದವು.
- ವಿಹಾರಗಳ ವಾಸದ ಕೊಠಡಿಗಳು, ಪ್ರಾರ್ಥನಾ ಮಂದಿರಗಳು, ಅಧ್ಯಯನ ಕೇಂದ್ರಗಳು, ಗ್ರಂಥಾಲಯಗಳು ಮತ್ತು ಇತರ ಕಟ್ಟಡಗಳ ನಿರ್ವಹಣೆಗೆ ವಿಶೇಷ ಗಮನ ನೀಡಲಾಗುತ್ತಿತ್ತು. ದಾನ ಮತ್ತು ಇತರ ಆದಾಯದ ಮೂಲಗಳಿಂದ ಈ ಕಾರ್ಯಗಳಿಗೆ ಸಂಪನ್ಮೂಲಗಳನ್ನು ಒದಗಿಸಲಾಗುತ್ತಿತ್ತು.
- ಮಹಾವಿಹಾರಗಳ ನಿರ್ವಹಣೆಯಲ್ಲಿ ಸ್ಥಳೀಯ ಸಮಾಜದ ಪಾತ್ರವೂ ಮಹತ್ವದ್ದಾಗಿತ್ತು. ಸಾಮಾನ್ಯ ಜನರು ಆಹಾರ, ವಸ್ತ್ರ, ಔಷಧಿ ಮತ್ತು ಇತರ ಅಗತ್ಯ ವಸ್ತುಗಳನ್ನು ದಾನ ಮಾಡುತ್ತಿದ್ದರು. ಇದರಿಂದ ಮಹಾವಿಹಾರಗಳು ಸಮಾಜದೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿದ್ದವು.
- ಮಹಾವಿಹಾರಗಳಲ್ಲಿ ಶಿಸ್ತನ್ನು ಕಾಪಾಡಲು ಸಂಘದ ಸಭೆಗಳು ಮತ್ತು ನಿಯಮಗಳನ್ನು ಅನುಸರಿಸಲಾಗುತ್ತಿತ್ತು. ನಿಯಮ ಉಲ್ಲಂಘನೆ ಮಾಡಿದ ಭಿಕ್ಷುಗಳ ವಿಚಾರಣೆ ನಡೆಸಿ, ಸಂಘದ ನಿರ್ಧಾರದ ಆಧಾರದ ಮೇಲೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿತ್ತು.

ಪ್ರಾಚೀನ ಬೌದ್ಧ ಮಹಾವಿಹಾರಗಳ ನಿರ್ವಹಣೆಯು ಸಂಘದ ಶಿಸ್ತು, ಸಮೂಹ ನಿರ್ಧಾರ, ದಾನಾಧಾರಿತ ಆರ್ಥಿಕ ವ್ಯವಸ್ಥೆ ಮತ್ತು ಶೈಕ್ಷಣಿಕ ಆಡಳಿತದ ಮೇಲೆ ಆಧಾರಿತವಾಗಿತ್ತು. ಈ ಸಂಘಟಿತ ನಿರ್ವಹಣಾ ವ್ಯವಸ್ಥೆಯೇ ನಳಂದಾ, ವಿಕ್ರಮಶೀಲಾ ಮತ್ತು ಇತರ ಮಹಾವಿಹಾರಗಳು ದೀರ್ಘಕಾಲದವರೆಗೆ ಜ್ಞಾನ ಮತ್ತು ಸಂಸ್ಕೃತಿಯ ಪ್ರಮುಖ ಕೇಂದ್ರಗಳಾಗಿ ಬೆಳೆಯಲು ಕಾರಣವಾಯಿತು.

**ಪ್ರಾಚೀನ ಬೌದ್ಧ ಮಹಾವಿಹಾರಗಳ ಕಾರ್ಯಚಟುವಟಿಕೆಗಳು:** ಪ್ರಾಚೀನ ಬೌದ್ಧ ಮಹಾವಿಹಾರಗಳು ಕೇವಲ ಭಿಕ್ಷುಗಳ ವಾಸಸ್ಥಳಗಳಾಗಿರದೆ ಧಾರ್ಮಿಕ, ಶೈಕ್ಷಣಿಕ, ಬೌದ್ಧಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಚಟುವಟಿಕೆಗಳ ಪ್ರಮುಖ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿದ್ದವು. ನಾಳಂದಾ, ವಿಕ್ರಮಶೀಲಾ, ಓದಂತಪುರಿ, ಸೋಮಪುರ ಮತ್ತು ವಲ್ಲಭಿಯಂತಹ ಮಹಾವಿಹಾರಗಳಲ್ಲಿ ವಿವಿಧ ರೀತಿಯ ಚಟುವಟಿಕೆಗಳು ನಡೆಯುತ್ತಿದ್ದವು. ಅವುಗಳೆಂದರೆ;

- ಮಹಾವಿಹಾರಗಳಲ್ಲಿ ಗುರು ಬುದ್ಧರ ಧಮ್ಮವನ್ನು ಅಧ್ಯಯನ ಮಾಡುವುದು, ಧರ್ಮೋಪದೇಶ ನೀಡುವುದು, ಪೂಜೆ, ಪ್ರಾರ್ಥನೆ ಮತ್ತು ಧಾರ್ಮಿಕ ಆಚರಣೆಗಳನ್ನು ನಡೆಸಲಾಗುತ್ತಿತ್ತು.

- ಮಹಾವಿಹಾರಗಳ ಪ್ರಮುಖ ಕಾರ್ಯವೇ ಶಿಕ್ಷಣ ಮತ್ತು ಜ್ಞಾನ ಪ್ರಸಾರವಾಗಿತ್ತು. ಬೌದ್ಧ ತತ್ವಶಾಸ್ತ್ರದ ಜೊತೆಗೆ ವ್ಯಾಕರಣ, ತರ್ಕಶಾಸ್ತ್ರ, ಭಾಷೆ, ವೈದ್ಯಶಾಸ್ತ್ರ, ಸಾಹಿತ್ಯ ಮತ್ತು ಇತರ ವಿಷಯಗಳನ್ನು ಬೋಧಿಸಲಾಗುತ್ತಿತ್ತು.
- ತ್ರಿಪಿಟಕ ಸೇರಿದಂತೆ ವಿವಿಧ ಬೌದ್ಧ ಗ್ರಂಥಗಳನ್ನು ಅಧ್ಯಯನ, ಪ್ರತಿಲೇಖನ ಮತ್ತು ಸಂರಕ್ಷಣೆ ಮಾಡಲಾಗುತ್ತಿತ್ತು.
- ವಿವಿಧ ಬೌದ್ಧ ಪಂಥಗಳ ವಿದ್ವಾಂಸರು ಮತ್ತು ಇತರ ತತ್ವಶಾಸ್ತ್ರಗಳ ಪಂಡಿತರು ಮಹಾವಿಹಾರಗಳಲ್ಲಿ ವಾದ–ವಿವಾದ ಮತ್ತು ತಾತ್ವಿಕ ಸಂವಾದ ನಡೆಸುತ್ತಿದ್ದರು.
- ಹೊಸಾಗಿ ಸಂಘಕ್ಕೆ ಸೇರಿದ ಭಿಕ್ಷುಗಳಿಗೆ ವಿನಯ ನಿಯಮಗಳು, ಧಮ್ಮ, ಧ್ಯಾನ ಮತ್ತು ಸಂಘ ಜೀವನದ ಕುರಿತು ತರಬೇತಿ ನೀಡಲಾಗುತ್ತಿತ್ತು.
- ಧ್ಯಾನ, ಮನನ ಮತ್ತು ಆತ್ಮಶುದ್ಧಿಗೆ ಮಹಾವಿಹಾರಗಳಲ್ಲಿ ವಿಶೇಷ ಸ್ಥಾನವಿತ್ತು. ಭಿಕ್ಷುಗಳು ತಮ್ಮ ಆಧ್ಯಾತ್ಮಿಕ ಸಾಧನೆಗಾಗಿ ನಿರ್ದಿಷ್ಟ ಸ್ಥಳಗಳಲ್ಲಿ ಧ್ಯಾನ ನಡೆಸುತ್ತಿದ್ದರು.
- ಮಹಾವಿಹಾರಗಳಿಂದ ತರಬೇತಿ ಪಡೆದ ಭಿಕ್ಷುಗಳು ಭಾರತದ ವಿವಿಧ ಪ್ರದೇಶಗಳಿಗೆ ಹಾಗೂ ಶ್ರೀಲಂಕಾ, ಚೀನಾ, ಟಿಬೆಟ್, ನೇಪಾಳ ಮತ್ತು ಆಗ್ನೇಯ ಏಷ್ಯಾದ ಪ್ರದೇಶಗಳಿಗೆ ತೆರಳಿ ಬೌದ್ಧ ಧರ್ಮವನ್ನು ಪ್ರಸಾರ ಮಾಡುತ್ತಿದ್ದರು.
- ಪ್ರಮುಖ ಮಹಾವಿಹಾರಗಳು ಅಂತರರಾಷ್ಟ್ರೀಯ ಶಿಕ್ಷಣ ಕೇಂದ್ರಗಳಾಗಿದ್ದವು. ವಿವಿಧ ದೇಶಗಳಿಂದ ಬಂದ ವಿದ್ಯಾರ್ಥಿಗಳು ಮತ್ತು ಭಿಕ್ಷುಗಳು ಇಲ್ಲಿ ವಾಸಿಸಿ ಬೌದ್ಧಧಮ್ಮ, ತತ್ವಶಾಸ್ತ್ರ ಮತ್ತು ಇತರ ವಿಷಯಗಳನ್ನು ಅಧ್ಯಯನ ಮಾಡುತ್ತಿದ್ದರು.
- ಪಾಳಿ, ಸಂಸ್ಕೃತ ಮತ್ತು ಇತರ ಭಾಷೆಗಳಲ್ಲಿ ಬೌದ್ಧ ಸಾಹಿತ್ಯ ರಚನೆ ಮತ್ತು ಅಧ್ಯಯನ ನಡೆಯುತ್ತಿತ್ತು. ಅನೇಕ ಅರಹಂತರ ವ್ಯಾಖ್ಯಾನ, ಟೀಕೆ ಮತ್ತು ತಾತ್ವಿಕ ಗ್ರಂಥಗಳನ್ನು ರಚಿಸಿದರು.
- ವಿದೇಶಗಳಿಂದ ಬಂದ ವಿದ್ವಾಂಸರು ಭಾರತೀಯ ಬೌದ್ಧ ಗ್ರಂಥಗಳನ್ನು ತಮ್ಮ ಭಾಷೆಗಳಿಗೆ ಅನುವಾದಿಸುತ್ತಿದ್ದರು. ಈ ಪ್ರಕ್ರಿಯೆಯ ಮೂಲಕ ಭಾರತೀಯ ಬೌದ್ಧ ಜ್ಞಾನವು ಚೀನಾ, ಟಿಬೆಟ್ ಮತ್ತು ಇತರ ದೇಶಗಳಿಗೆ ಹರಡಿತು.
- ಮಹಾವಿಹಾರಗಳು ಸ್ಥಳೀಯ ಸಮಾಜದೊಂದಿಗೆ ನಿಕಟ ಸಂಬಂಧ ಹೊಂದಿದ್ದವು. ಬಡವರು, ಪ್ರಯಾಣಿಕರು ಮತ್ತು ಧಮ್ಮಾನುಯಾಯಿಗಳಿಗೆ ಆಹಾರ, ಆಶ್ರಯ ಹಾಗೂ ಅಗತ್ಯ ಸಂದರ್ಭಗಳಲ್ಲಿ ನೆರವು ನೀಡುವ ಕಾರ್ಯವೂ ನಡೆಯುತ್ತಿತ್ತು.

- ಸ್ತೂಪ, ಚೈತ್ಯ, ವಿಹಾರ, ಶಿಲ್ಪ ಮತ್ತು ಚಿತ್ರಕಲೆಯ ಬೆಳವಣಿಗೆಗೆ ಮಹಾವಿಹಾರಗಳು ಉತ್ತೇಜನ ನೀಡಿದವು. ಸೋಮಪುರ ಮತ್ತು ನಳಂದಾದಂತಹ ಕೇಂದ್ರಗಳು ಬೌದ್ಧ ವಾಸ್ತುಶಿಲ್ಪದ ಉನ್ನತ ಮಟ್ಟವನ್ನು ಪ್ರತಿಬಿಂಬಿಸುತ್ತವೆ.
- ಮಹಾವಿಹಾರಗಳು ಭಾರತ ಮತ್ತು ಏಷ್ಯಾದ ಇತರ ದೇಶಗಳ ನಡುವೆ ಜ್ಞಾನ, ಧರ್ಮ ಮತ್ತು ಸಂಸ್ಕೃತಿಯ ವಿನಿಮಯ ಕೇಂದ್ರಗಳಾಗಿ ಕಾರ್ಯನಿರ್ವಹಿಸಿದವು. ವಿದೇಶಿ ಭಿಕ್ಷುಗಳು ಮತ್ತು ವಿದ್ಯಾರ್ಥಿಗಳ ಆಗಮನದಿಂದ ವಿವಿಧ ಸಂಸ್ಕೃತಿಗಳ ನಡುವೆ ಸಂಪರ್ಕ ಬೆಳೆದಿತು.
- ಭಿಕ್ಷು ಸಂಘದ ನಿಯಮಗಳನ್ನು ಪಾಲಿಸುವುದು, ಸಂಘದ ಸಭೆಗಳನ್ನು ನಡೆಸುವುದು, ಭಿಕ್ಷುಗಳ ನಡುವಿನ ಸಮಸ್ಯೆಗಳನ್ನು ಪರಿಹರಿಸುವುದು ಮತ್ತು ಮಹಾವಿಹಾರದ ದೈನಂದಿನ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ನಿರ್ವಹಿಸುವುದು ಪ್ರಮುಖ ಕಾರ್ಯಗಳಾಗಿದ್ದವು. ಪ್ರಾಚೀನ ಬೌದ್ಧ ಮಹಾವಿಹಾರಗಳ ಕಾರ್ಯಚಟುವಟಿಕೆಗಳು ಬಹುಮುಖವಾಗಿದ್ದವು. ಅವು ವಾಸಸ್ಥಳ, ಧಾರ್ಮಿಕ ಕೇಂದ್ರ, ವಿಶ್ವವಿದ್ಯಾಲಯ, ಗ್ರಂಥಾಲಯ, ಸಂಶೋಧನಾ ಕೇಂದ್ರ, ಸಾಂಸ್ಕೃತಿಕ ಸಂಸ್ಥೆ ಮತ್ತು ಅಂತರಾಷ್ಟ್ರೀಯ ಜ್ಞಾನ ವಿನಿಮಯ ಕೇಂದ್ರಗಳಾಗಿ ಕಾರ್ಯನಿರ್ವಹಿಸಿದ್ದವು. ಈ ಕಾರಣದಿಂದಲೇ ಪ್ರಾಚೀನ ಭಾರತದ ಜ್ಞಾನ ಮತ್ತು ಬೌದ್ಧ ಪರಂಪರೆಯನ್ನು ಏಷ್ಯಾದಾದ್ಯಂತ ಹರಡುವಲ್ಲಿ ಮಹಾವಿಹಾರಗಳು ನಿರ್ಣಾಯಕ ಪಾತ್ರ ವಹಿಸಿದವು.

**ನಳಂದಾ ಮಹಾವಿಹಾರ:** ನಳಂದಾ ಮಹಾವಿಹಾರವು ಪ್ರಾಚೀನ ಭಾರತದ ಅತ್ಯಂತ ಪ್ರಸಿದ್ಧ ಬೌದ್ಧ ಶಿಕ್ಷಣ ಕೇಂದ್ರಗಳಲ್ಲಿ ಒಂದಾಗಿತ್ತು. ಇದನ್ನು ಗುಪ್ತ ರಾಜವಂಶದ ಚಕ್ರವರ್ತಿಯಾಗಿದ್ದ ಕುಮಾರಗುಪ್ತನು ಸರಿಸುಮಾರು ಕ್ರಿ.ಶ 415–455ರಲ್ಲಿ ಸ್ಥಾಪಿಸಿದನು ಎಂಬುದು ತಿಳಿದುಬರುತ್ತದೆ. ಇದು ಬೌದ್ಧಧಮ್ಮದ ಜೊತೆಗೆ ತರ್ಕಶಾಸ್ತ್ರ, ವ್ಯಾಕರಣ, ವೈದ್ಯಶಾಸ್ತ್ರ, ಖಗೋಳಶಾಸ್ತ್ರ ಮತ್ತು ತತ್ವಶಾಸ್ತ್ರದ ಅಧ್ಯಯನಕ್ಕೂ ಹೆಸರುವಾಸಿಯಾಗಿತ್ತು. ನಳಂದಾದಲ್ಲಿ ಭಾರತ ಮತ್ತು ವಿದೇಶಗಳಿಂದ ಅನೇಕ ವಿದ್ಯಾರ್ಥಿಗಳು ಮತ್ತು ವಿದ್ವಾಂಸರು ಶಿಕ್ಷಣ ಪಡೆಯಲು ಆಗಮಿಸುತ್ತಿದ್ದರು. ಚೀನಾದ ಯಾತ್ರಿಕರಾದ ಫಾಹಿಯಾನ್ ಮತ್ತು ಹ್ಯುಯೆನ್‌ತ್ಸಾಂಗ್ ಅವರ ಪ್ರವಾಸ ವಿವರಗಳು ನಳಂದಾದ ಶೈಕ್ಷಣಿಕ ಮತ್ತು ಧಾರ್ಮಿಕ ಮಹತ್ವದ ಕುರಿತು ಪ್ರಮುಖ ಮಾಹಿತಿಯನ್ನು ಒದಗಿಸುತ್ತವೆ. ವಿಶಾಲ ವಿದ್ಯಾರ್ಥಿ ಮತ್ತು ಭಿಕ್ಷು ಸಮುದಾಯ, ದೊಡ್ಡ ಗ್ರಂಥಾಲಯಗಳು, ಉನ್ನತ ಮಟ್ಟದ ತಾತ್ವಿಕ ಚರ್ಚೆಗಳು, ಬೌದ್ಧ ಮತ್ತು ಲೌಕಿಕ ವಿಷಯಗಳ ಅಧ್ಯಯನ, ಅಂತರಾಷ್ಟ್ರೀಯ ವಿದ್ಯಾರ್ಥಿಗಳ ಉಪಸ್ಥಿತಿ, ಸಂಘಟಿತ ಶಿಕ್ಷಣ ಮತ್ತು ವಸತಿ ವ್ಯವಸ್ಥೆಯನ್ನು ಒದಗಿಸುವ ನಳಂದಾವನ್ನು ಪ್ರಾಚೀನ ಜಗತ್ತಿನ ಪ್ರಮುಖ ಉನ್ನತ ಶಿಕ್ಷಣ ಕೇಂದ್ರಗಳಲ್ಲಿ ಒಂದೆಂದು ಪರಿಗಣಿಸಲಾಗುತ್ತದೆ.

**ವಿಕ್ರಮಶೀಲಾ ಮಹಾವಿಹಾರ:** ವಿಕ್ರಮಶೀಲಾ ಮಹಾವಿಹಾರವನ್ನು ಸರಿಸುಮಾರು ಕ್ರಿ.ಶ ಎಂಟನೆಯ ಶತಮಾನದ ಕೊನೆಯಲ್ಲಿ ಅಥವಾ ಒಂಭತ್ತನೆಯ ಶತಮಾನ ಆರಂಭದಲ್ಲಿ ಅಂದರೆ; ಕ್ರಿ.ಶ 783–820ರಲ್ಲಿ ಪಾಲ ರಾಜವಂಶದ ದೊರೆಯಾಗಿದ್ದ ರಾಜಧರ್ಮಪಾಲ ಎಂಬುವನ ಆಳ್ವಿಕೆಯ ಕಾಲದಲ್ಲಿ ಸ್ಥಾಪಿತವಾದ ಪ್ರಮುಖ ಬೌದ್ಧ ಶಿಕ್ಷಣ ಕೇಂದ್ರವಾಗಿತ್ತು. ಇದು ವಜ್ರಯಾನ ಬೌದ್ಧಧಮ್ಮದ ಅಧ್ಯಯನ ಮತ್ತು ಪ್ರಸಾರದಲ್ಲಿ ವಿಶೇಷ ಪಾತ್ರ ವಹಿಸಿತು. ವಿಕ್ರಮಶೀಲಾದಲ್ಲಿ ಬೌದ್ಧ ತತ್ವಶಾಸ್ತ್ರ, ತರ್ಕಶಾಸ್ತ್ರ, ವ್ಯಾಕರಣ ಮತ್ತು ತಾಂತ್ರಿಕ ಬೌದ್ಧ ಪರಂಪರೆಗಳ ಅಧ್ಯಯನ ನಡೆಯುತ್ತಿತ್ತು. ಅನೇಕ ಪ್ರಸಿದ್ಧ ಅರಹಂತರು ಈ ಮಹಾವಿಹಾರಕ್ಕೆ ಸಂಬಂಧ ಹೊಂದಿದ್ದರು. ಟಿಬೆಟ್‌ನಲ್ಲಿ ಬೌದ್ಧಧಮ್ಮದ ಬೆಳವಣಿಗೆಗೆ ವಿಕ್ರಮಶೀಲಾ ಮಹಾವಿಹಾರದಿಂದ ಹೊರಹೊಮ್ಮಿದ ವಿದ್ವಾಂಸರ ಕೊಡುಗೆ ಗಮನಾರ್ಹವಾಗಿದೆ.

**ವಲ್ಲಭಿ ಮಹಾವಿಹಾರ:** ವಲ್ಲಭಿ ಮಹಾವಿಹಾರವನ್ನು ಸರಿಸುಮಾರು ಕ್ರಿ.ಶ ಐದನೆಯ ಶತಮಾನ ಕೊನೆಯಲ್ಲಿ ಅಂದರೆ; ಕ್ರಿ.ಶ 470–480ರ ಅವಧಿಯಲ್ಲಿ ಮೈತ್ರಕ ವಂಶದ ರಾಜನಾಗಿದ್ದ ಭಟ್ಟಾರ್ಕ ಎಂಬುವನು ಪಶ್ಚಿಮ ಭಾರತದಲ್ಲಿ ಅಂದರೆ, ಗುಜರಾತಿನಲ್ಲಿ ಸ್ಥಾಪಿಸಿರುವ ಪ್ರಮುಖ ಶೈಕ್ಷಣಿಕ ಮತ್ತು ಬೌದ್ಧ ಅಧ್ಯಯನ ಕೇಂದ್ರವಾಗಿತ್ತು. ಇಲ್ಲಿ ಬೌದ್ಧಧಮ್ಮದ ಜೊತೆಗೆ ಆಡಳಿತ, ರಾಜಕೀಯ, ಅರ್ಥಶಾಸ್ತ್ರ ಮತ್ತು ಇತರ ಜ್ಞಾನಶಾಖೆಗಳ ಅಧ್ಯಯನವೂ ನಡೆಯುತ್ತಿತ್ತು. ವಲ್ಲಭಿ ಮಹಾವಿಹಾರವು ವಿಶೇಷವಾಗಿ ಬೌದ್ಧ ಶಿಕ್ಷಣದ ಪ್ರಾದೇಶಿಕ ಕೇಂದ್ರವಾಗಿ ಪ್ರಸಿದ್ಧಿ ಪಡೆದಿತ್ತು. ಭಾರತದ ವಿವಿಧ ಭಾಗಗಳಿಂದ ವಿದ್ಯಾರ್ಥಿಗಳು ಇಲ್ಲಿಗೆ ಆಗಮಿಸುತ್ತಿದ್ದರು. ಇದು ಪ್ರಾಚೀನ ಭಾರತೀಯ ಶಿಕ್ಷಣ ವ್ಯವಸ್ಥೆಯ ವೈವಿಧ್ಯತೆಯನ್ನು ಪ್ರತಿನಿಧಿಸುವ ಪ್ರಮುಖ ಸಂಸ್ಥೆಯಾಗಿತ್ತು.

**ಓದಂತಪುರಿ ಮಹಾವಿಹಾರ:** ಓದಂತಪುರಿ ಮಹಾವಿಹಾರವನ್ನು ಬಿಹಾರದ ಷರೀಫ್ ಎಂಬ ಪ್ರದೇಶದಲ್ಲಿ ಸರಿಸುಮಾರು ಎಂಟನೆಯ ಶತಮಾನದಲ್ಲಿ ಅಂದರೆ; ಕ್ರಿ.ಶ 750ರಲ್ಲಿ ಪಾಲ ವಂಶದ ಸ್ಥಾಪಕನಾದ ಗೋಪಾಲ ಎಂಬ ದೊರೆಯ ಆಳ್ವಿಕೆಯ ಕಾಲದಲ್ಲಿ ಸ್ಥಾಪಿತವಾಗಿರುವ ಪ್ರಮುಖ ಬೌದ್ಧ ಶಿಕ್ಷಣ ಕೇಂದ್ರವಾಗಿತ್ತು. ಇದು ನಳಂದಾ ಮತ್ತು ವಿಕ್ರಮಶೀಲಾ ಮಹಾವಿಹಾರಗಳೊಂದಿಗೆ ನಿಕಟವಾದ ಶೈಕ್ಷಣಿಕ ಸಂಬಂಧವನ್ನು ಹೊಂದಿತ್ತು ಎಂದು ಪರಿಗಣಿಸಲಾಗಿದೆ. ಬೌದ್ಧ ತತ್ವಶಾಸ್ತ್ರ ಮತ್ತು ಸಂಘದ ಶಿಕ್ಷಣದಲ್ಲಿ ಈ ಮಹಾವಿಹಾರವು ಮಹತ್ವದ ಪಾತ್ರ ವಹಿಸಿತು.

**ಸೋಮಪುರ ಮಹಾವಿಹಾರ:** ಸೋಮಪುರ ಮಹಾವಿಹಾರ ಬೌದ್ಧ ವಾಸ್ತುಶಿಲ್ಪದ ದೃಷ್ಟಿಯಿಂದ ಅತ್ಯಂತ ಮಹತ್ವದ ಕೇಂದ್ರವಾಗಿತ್ತು. ಇದನ್ನು ಪಾಲ ರಾಜವಂಶದ ಎರಡನೆಯ ರಾಜನಾದ ಧರ್ಮಪಾನು ಸರಿಸುಮಾರು ಎಂಟನೆಯ ಶತಮಾನದ ಕೊನೆಯಲ್ಲಿ ಅಂದರೆ; ಕ್ರಿ.ಶ 781 ರಿಂದ 821ರ ಅವಧಿಯಲ್ಲಿ ನೌಗಾಂವ್‌ನ ಪಹರಪುರಲ್ಲಿ ಸ್ಥಾಪಿಸಿದನು. ಇದರ ವಿಶಾಲ ನಿರ್ಮಾಣ, ಕೇಂದ್ರ ದೇವಾಲಯ ಮತ್ತು ಭಿಕ್ಷುಗಳ ವಾಸದ ಕೋಣೆಗಳು ಪ್ರಾಚೀನ ಬೌದ್ಧ ವಾಸ್ತುಶಿಲ್ಪದ ಉನ್ನತ ಮಟ್ಟವನ್ನು ಪ್ರತಿಬಿಂಬಿಸುತ್ತವೆ.

ಸೋಮಪುರ ಮಹಾವಿಹಾರವು ಧಾರ್ಮಿಕ ಮತ್ತು ಶೈಕ್ಷಣಿಕ ಕೇಂದ್ರವಾಗಿರುವುದರ ಜೊತೆಗೆ ಕಲೆ ಮತ್ತು ವಾಸ್ತುಶಿಲ್ಪದ ಬೆಳವಣಿಗೆಯಲ್ಲಿಯೂ ಗಮನಾರ್ಹ ಕೊಡುಗೆಯನ್ನು ನೀಡಿತು.

**ಮಹಾವಿಹಾರಗಳ ಶೈಕ್ಷಣಿಕ ವ್ಯವಸ್ಥೆ:** ಪ್ರಾಚೀನ ಬೌದ್ಧ ಮಹಾವಿಹಾರಗಳ ಶಿಕ್ಷಣ ವ್ಯವಸ್ಥೆಯು ವಿಶಾಲ ಮತ್ತು ಬಹುಮುಖವಾಗಿತ್ತು. ಇಲ್ಲಿ ಕೇವಲ ಧಾರ್ಮಿಕ ಗ್ರಂಥಗಳ ಅಧ್ಯಯನ ಮಾತ್ರ ನಡೆಯುತ್ತಿರಲಿಲ್ಲ. ಅನೇಕ ಲೌಕಿಕ ವಿಷಯಗಳಿಗೂ ಮಹತ್ವ ನೀಡಲಾಗುತ್ತಿತ್ತು. ಪ್ರಮುಖ ಅಧ್ಯಯನ ವಿಷಯಗಳೆಂದರೆ; ಬೌದ್ಧ ತತ್ವಶಾಸ್ತ್ರ, ವಿನಯ ಮತ್ತು ಸಂಘ ನಿಯಮಗಳು, ತರ್ಕಶಾಸ್ತ್ರ, ವ್ಯಾಕರಣ, ಭಾಷೆ ಮತ್ತು ಸಾಹಿತ್ಯ, ವೈದ್ಯಶಾಸ್ತ್ರ, ಗಣಿತ ಮತ್ತು ಖಗೋಳಶಾಸ್ತ್ರ, ಧ್ಯಾನ ಮತ್ತು ಯೋಗ. ಶಿಕ್ಷಣವು ಸಾಮಾನ್ಯವಾಗಿ ಗುರು–ಶಿಷ್ಯ ಪರಂಪರೆ, ಉಪನ್ಯಾಸ, ಚರ್ಚೆ ಮತ್ತು ವಾದ–ವಿವಾದಗಳ ಮೂಲಕ ನಡೆಯುತ್ತಿತ್ತು. ವಿದ್ಯಾರ್ಥಿಗಳ ಬೌದ್ಧಿಕ ಸಾಮರ್ಥ್ಯವನ್ನು ಬೆಳೆಸಲು ತಾತ್ವಿಕ ಸಂವಾದಗಳಿಗೆ ವಿಶೇಷ ಮಹತ್ವ ನೀಡಲಾಗುತ್ತಿತ್ತು.

**ಜ್ಞಾನ ಪ್ರಸಾರದಲ್ಲಿ ಮಹಾವಿಹಾರಗಳ ಪಾತ್ರ:** ಬೌದ್ಧ ಮಹಾವಿಹಾರಗಳು ಭಾರತದ ಜ್ಞಾನ ಮತ್ತು ಸಂಸ್ಕೃತಿಯನ್ನು ವಿದೇಶಗಳಿಗೆ ಹರಡುವಲ್ಲಿ ಮಹತ್ವದ ಪಾತ್ರ ವಹಿಸಿದವು. ಚೀನಾ, ಟಿಬೆಟ್, ಶ್ರೀಲಂಕಾ, ನೇಪಾಳ ಮತ್ತು ಆಗ್ನೇಯ ಏಷ್ಯಾದ ಅನೇಕ ವಿದ್ವಾಂಸರು ಭಾರತೀಯ ಮಹಾವಿಹಾರಗಳಿಗೆ ಭೇಟಿ ನೀಡಿ ಅಧ್ಯಯನ ಮಾಡುತ್ತಿದ್ದರು. ಬೌದ್ಧ ಗ್ರಂಥಗಳ ಅನುವಾದದ ಮೂಲಕ ಭಾರತೀಯ ತತ್ವಶಾಸ್ತ್ರವು ವಿವಿಧ ದೇಶಗಳಿಗೆ ತಲುಪಿತು. ಟಿಬೆಟ್ ಮತ್ತು ಚೀನಾದಲ್ಲಿ ಬೌದ್ಧ ಜ್ಞಾನದ ಬೆಳವಣಿಗೆಯಲ್ಲಿ ಭಾರತೀಯ ಮಹಾವಿಹಾರಗಳ ಕೊಡುಗೆ ಅಪಾರವಾಗಿದೆ. ಈ ಮಹಾವಿಹಾರಗಳು ಒಂದು ರೀತಿಯಲ್ಲಿ ಪ್ರಾಚೀನ ಕಾಲದ ಅಂತರಾಷ್ಟ್ರೀಯ ಜ್ಞಾನ ವಿನಿಮಯ ಕೇಂದ್ರಗಳಾಗಿ ಕಾರ್ಯನಿರ್ವಹಿಸಿದವು.

**ಸಾಮಾಜಿಕ ಮತ್ತು ಸಾಂಸ್ಕೃತಿಕ ಕೊಡುಗೆ:** ಮಹಾವಿಹಾರಗಳು ಕೇವಲ ಶಿಕ್ಷಣ ಸಂಸ್ಥೆಗಳಾಗಿರಲಿಲ್ಲ. ಅವು ಸಮಾಜದ ಧಾರ್ಮಿಕ ಮತ್ತು ಸಾಂಸ್ಕೃತಿಕ ಜೀವನದ ಕೇಂದ್ರಗಳಾಗಿ; ಧರ್ಮ ಮತ್ತು ನೈತಿಕತೆಯ ಪ್ರಸಾರ, ಶಿಕ್ಷಣದ ವಿಸ್ತರಣೆ, ಸಾಹಿತ್ಯ ಮತ್ತು ಗ್ರಂಥರಚನೆ, ಕಲಾ ಮತ್ತು ವಾಸ್ತುಶಿಲ್ಪದ ಬೆಳವಣಿಗೆ, ವಿವಿಧ ದೇಶಗಳ ನಡುವೆ ಸಾಂಸ್ಕೃತಿಕ ಸಂಪರ್ಕ, ಬೌದ್ಧ ತತ್ವಶಾಸ್ತ್ರದ ಸಂರಕ್ಷಣೆ, ಗ್ರಂಥಗಳ ಪ್ರತಿಲೇಖನ ಮತ್ತು ಸಂರಕ್ಷಣೆ. ಮಹಾವಿಹಾರಗಳ ಗ್ರಂಥಾಲಯಗಳು ಪ್ರಾಚೀನ ಭಾರತದ ಜ್ಞಾನ ಸಂಪತ್ತನ್ನು ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವು.

**ಬೌದ್ಧ ಮಹಾವಿಹಾರಗಳ ಅವನತಿ:** ಕ್ರಿ.ಶ. ಮೊದಲನೆಯ ಸಹಸ್ರಮಾನದ ಅಂತ್ಯದ ವೇಳೆಗೆ ಅನೇಕ ಬೌದ್ಧ ಮಹಾವಿಹಾರಗಳು ಕ್ರಮೇಣ ದುರ್ಬಲಗೊಂಡವು. ಇದಕ್ಕಿದ್ದ ಪ್ರಮುಖ ಕಾರಣಗಳೆಂದರೆ; ರಾಜಾಶ್ರಯದ ಕುಸಿತ, ಬೌದ್ಧಧಮ್ಮದ ಆಂತರಿಕ ಪಂಥೀಯ ಭಿನ್ನತೆಗಳು, ಬ್ರಾಹ್ಮಣ ಧರ್ಮ ಮತ್ತು ಇತರ ಧಾರ್ಮಿಕ ಪರಂಪರೆಗಳ ಪುನರುತ್ಥಾನ, ಆರ್ಥಿಕ ಬೆಂಬಲದ ಕೊರತೆ, ರಾಜಕೀಯ ಅಸ್ಥಿರತೆ,

ಆಕ್ರಮಣಗಳು ಮತ್ತು ಯುದ್ಧಗಳು. ಈ ಕಾರಣಗಳಿಂದ ನಳಂದಾ, ವಿಕ್ರಮಶೀಲಾ ಮತ್ತು ಇತರ ಮಹಾವಿಹಾರಗಳ ಶೈಕ್ಷಣಿಕ ಚಟುವಟಿಕೆಗಳು ಕ್ರಮೇಣ ಕುಸಿದವು. ಆದಾಗ್ಯೂ, ಅವುಗಳ ಜ್ಞಾನ ಮತ್ತು ಸಾಂಸ್ಕೃತಿಕ ಪರಂಪರೆ ಏಷ್ಯಾದ ಅನೇಕ ದೇಶಗಳಲ್ಲಿ ಮುಂದುವರಿಯಿತು.

ಪ್ರಾಚೀನ ಬೌದ್ಧ ಮಹಾವಿಹಾರಗಳ ಅಧ್ಯಯನವು ಭಾರತದ ಶಿಕ್ಷಣದ ಇತಿಹಾಸವನ್ನು ಅರ್ಥಮಾಡಿಕೊಳ್ಳಲು ಅತ್ಯಂತ ಅಗತ್ಯವಾಗಿದೆ. ಈ ಸಂಸ್ಥೆಗಳು ಕೇವಲ ಧಾರ್ಮಿಕ ಶಿಕ್ಷಣ ಕೇಂದ್ರಗಳಾಗಿರಲಿಲ್ಲ; ಅವು ಬಹುಶಿಸ್ತೀಯ ಜ್ಞಾನ ಕೇಂದ್ರಗಳಾಗಿದ್ದವು. ಮಹಾವಿಹಾರಗಳ ಪ್ರಮುಖ ಶಕ್ತಿ ಅವುಗಳ ಅಂತರಾಷ್ಟ್ರೀಯ ಸ್ವರೂಪವಾಗಿತ್ತು. ವಿವಿಧ ದೇಶಗಳ ವಿದ್ಯಾರ್ಥಿಗಳು ಮತ್ತು ವಿದ್ವಾಂಸರು ಒಂದೇ ಸ್ಥಳದಲ್ಲಿ ಸೇರಿ ಜ್ಞಾನ ವಿನಿಮಯ ನಡೆಸುತ್ತಿದ್ದರು. ಆದರೆ ರಾಜಾಶ್ರಯ ಮತ್ತು ದಾನದ ಮೇಲೆ ಹೆಚ್ಚಿನ ಅವಲಂಬನೆ ಇವುಗಳ ದೌರ್ಬಲ್ಯವಾಗಿತ್ತು. ರಾಜಕೀಯ ಪರಿಸ್ಥಿತಿಯಲ್ಲಿ ಬದಲಾವಣೆ ಉಂಟಾದಾಗ ಸಂಸ್ಥೆಗಳ ಆರ್ಥಿಕ ಅಡಿಪಾಯ ಕುಸಿಯಿತು. ಆದ್ದರಿಂದ ಮಹಾವಿಹಾರಗಳ ಇತಿಹಾಸವು ಜ್ಞಾನ ಸಂಸ್ಥೆಗಳ ಬೆಳವಣಿಗೆ ಮತ್ತು ಅವನತಿಯು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಪರಿಸ್ಥಿತಿಗಳೊಂದಿಗೆ ಹೇಗೆ ಸಂಬಂಧ ಹೊಂದಿದೆ ಎಂಬುದನ್ನು ತಿಳಿಸುತ್ತದೆ.

**ಉಪಸಂಹಾರ**

ಪ್ರಾಚೀನ ಬೌದ್ಧ ಮಹಾವಿಹಾರಗಳು ಭಾರತದ ಧಾರ್ಮಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವನ್ನು ಹೊಂದಿವೆ. ನಳಂದಾ, ವಿಕ್ರಮಶೀಲಾ, ವಲ್ಲಭಿ, ಓದಂತಪುರಿ ಮತ್ತು ಸೋಮಪುರದಂತಹ ಮಹಾವಿಹಾರಗಳು ಬೌದ್ಧಧಮ್ಮದ ಪ್ರಸಾರಕ್ಕೆ ಮಾತ್ರವಲ್ಲದೆ ಜ್ಞಾನ, ತತ್ವಶಾಸ್ತ್ರ, ಸಾಹಿತ್ಯ ಮತ್ತು ಸಂಸ್ಕೃತಿಯ ಬೆಳವಣಿಗೆಗೂ ಅಮೂಲ್ಯ ಕೊಡುಗೆ ನೀಡಿರುತ್ತವೆ. ಈ ಸಂಸ್ಥೆಗಳು ಪ್ರಾಚೀನ ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಯ ಸಂಘಟಿತ ಸ್ವರೂಪವನ್ನು ಪ್ರತಿಬಿಂಬಿಸುತ್ತವೆ. ಅವುಗಳ ಮೂಲಕ ಭಾರತೀಯ ಜ್ಞಾನ ಪರಂಪರೆಯು ಏಷ್ಯಾದ ವಿವಿಧ ಭಾಗಗಳಿಗೆ ಹರಡಿತು. ಇವುಗಳಲ್ಲಿ ಅನೇಕ ಸಂಸ್ಥೆಗಳು ಕಾಲಕ್ರಮೇಣ ನಾಶವಾದರೂ, ಅವುಗಳ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪರಂಪರೆ ಇಂದಿಗೂ ಜೀವಂತವಾಗಿದೆ. ಪ್ರಾಚೀನ ಬೌದ್ಧ ಮಹಾವಿಹಾರಗಳು ಕೇವಲ ಬೌದ್ಧಧಮ್ಮದ ಕೇಂದ್ರಗಳಲ್ಲ; ಅವು ಮಾನವ ಜ್ಞಾನದ ಬೆಳವಣಿಗೆ, ಅಂತರಾಷ್ಟ್ರೀಯ ಸಾಂಸ್ಕೃತಿಕ ಸಂಪರ್ಕ ಮತ್ತು ಪ್ರಾಚೀನ ಭಾರತದ ಶೈಕ್ಷಣಿಕ ಶ್ರೇಷ್ಠತೆಯ ಮಹತ್ವದ ಸಂಕೇತಗಳಾಗಿರುತ್ತವೆ.

## ಆಧಾರ ಗ್ರಂಥಗಳು


1. Altekar.A.S, Education in Ancient India.
2. Basham.A.L, The Wonder That Was India.
3. Conze, Edward. Buddhist Thought in India.
4. Dutt, Sukumar, Buddhist Monks and Monasteries of India.
5. Gombrich, Richard F. Theravada Buddhism.
6. Hirakawa, Akira, A History of Indian Buddhism.
7. Lamotte, Étienne. History of Indian Buddhism.
8. Nakamura, Hajime, Indian Buddhism.
9. Warder.A.K, Indian Buddhism.
10. Xuanzang, The Great Tang Records on the Western Regions.